ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಕನಿಷ್ಠ ಶೇಕಡ 3 ರಷ್ಟು ಅಧಿಕ್ಯತೆ (ರೇಟ್ ಆಫ್ ರಿಟರ್ನ್ಸ್) ಯನ್ನು ಕಾಪಾಡಿಕೊಂಡು ಬರಲು ಗ್ರಾಮೀಣ ವಿದ್ಯುದ್ಧೀಕರಣದ ಬಗ್ಗೆ ಸಹಾಯಧನವನ್ನು ಸರ್ಕಾರದಿಂದ ಪಡೆಯುತ್ತಿದೆ.

ಊ) ವಿದ್ಯುತ್ ಮಂಡಳಿಯನ್ನು ಕಾಯಕಲ್ಪಗೊಳಿಸಲು ಸರ್ಕಾರ ಒಂದು ಜಂಟಿ ಸಮಿತಿಯನ್ನು ರಚಿಸಿದೆ. ಇದರ ಬಗ್ಗೆ ಸರ್ಕಾರ ಸಮಾಲೋಚಿಸುತ್ತಿದೆ.

ಅಧ್ಯಕ್ಷರು : ಮಂಡಿಸಲಾಯಿತು.

ವರದಿಗಳನ್ನೊಪ್ಪಿಸುವುದು

ಶ್ರೀ ಅಂಜನಮೂರ್ತಿ (ಉಪಾಧ್ಯಕ್ಷರು) : ಮಾನ್ಯ ಅಧ್ಯಕ್ಷರೇ, ವಿಧಾನಸಭೆಯ ಅರ್ಜಿಗಳ ಸಮಿತಿಯ 3ನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ವರದಿಯನ್ನು ಸಭೆಗೆ ಒಪ್ಪಿಸಲಾಯಿತು.

ಶ್ರೀ ಡಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯು 13ನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ವರದಿಯನ್ನು ಸಭೆಗೆ ಒಪ್ಪಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಎಂ. ನಾರಾಯಣ ಸ್ವಾಮಿ (ಜನತಾದಳ) ಯವರು "ನ್ಯಾಯಾಂಗ ತನಿಖೆ ನಡೆಸಲೇ ಬೇಕು, ಕಾಂಗ್ರೆಸ್ ಸರ್ಕಾರ ರಾಜೀನಾಮೆ ಕೊಡಲೇ ಬೇಕು" ಎಂದು ಘೋಷಣೆ ಕೂಗುತ್ತಿದ್ದರು.)

ನಿರ್ಣಯ

ಶ್ರೀ ಎಂ. ನಾರಾಯಣಸ್ವಾಮಿ (ಜನತಾದಳ) ಅವರನ್ನು ಅಧಿವೇಶನ ಮುಗಿಯುವವರೆಗೆ ಸಭೆಗೆ ಹಾಜರಾಗದಂತೆ ನಿಷೇಧಿಸುವುದು

ಅಧ್ಯಕ್ಷರು : ಮಾನ್ಯ ಸದಸ್ಯರು ತಮ್ಮ ಸ್ಥಳಕ್ಕೆ ಹೋಗಬೇಕೆಂದು ನಾನ ಮತ್ತೊಮ್ಮೆ ವಿನಂತಿಸುತ್ತೇನೆ. ಇಲ್ಲವಾದಲ್ಲಿ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಮಾನ್ಯ ಸದಸ್ಯರು ತಮ್ಮ ಸ್ಥಾನಕ್ಕೆ ಹೋಗಬೇಕೆಂದು ನಾನು ವಿನಂತಿ ಮಾಡಿಕೊಂಡರೂ ಅವರು ನನ್ನ ಮನವಿಗೆ ಪುರಸ್ಕಾರ ಕೊಡದೆ ನನ್ನ ಅಧಿಕಾರದ ವಿಷಯದಲ್ಲಿ ಲಕ್ಷ್ಯವಿಲ್ಲದೆ ತಿರಸ್ಕಾರ ಮಾಡುತ್ತಾ ಸದನದ ಕಾರ್ಯಕಲಾಪಗಳಿಗೆ ಒಂದೇ ಸಮನಾಗಿ ಮತ್ತು ಉದ್ದೇಶಪೂರ್ವಕವಾಗಿ ಅಡಚಣೆಯುಂಟು ಮಾಡುತ್ತಿದ್ದಾರೆ. ಆದುದರಿಂದ ನಿಯಮ 331ರ ಮೇರೆಗೆ ಈ ಸದಸ್ಯರು ಸಭೆಯ ಕಾರ್ಯಕಲಾಪಗಳಿಗೆ ಸತತವಾಗಿ ಅಡ್ಡಿಪಡಿಸಿದುದಕ್ಕಾಗಿ ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದನ್ನು ನಿಷೇಧಿಸಲಾಗಿದೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಈ ಕೆಳಗಿನ ನಿರ್ಣಯವನ್ನು ಮಂಡಿಸುತ್ತೇನೆ. "ಶ್ರೀ ನಾರಾಯಣಸ್ವಾಮಿಯವರು ಅನಾವಶ್ಯಕವಾಗಿ ಸಭೆಯ ಕಾರ್ಯಕಲಾಪಗಳಿಗೆ ಅಡ್ಡಿಪಡಿಸುತ್ತಿರುವುದರಿಂದ ಅವರನ್ನು ಈ ಸಭೆಯ ಅಧಿವೇಶನ ಮುಗಿಯುವವರೆಗೆ ಸಭೆಗೆ ಹಾಜರಾಗದಂತೆ ನಿಷೇಧಿಸಬೇಕು.

ಅಧ್ಯಕ್ಷರು : ಪ್ರಸ್ತಾವನೆಯನ್ನು ನಾನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವನೆಯೆಂದರೆ, ಶ್ರೀ ಎಂ. ನಾರಾಯಣಸ್ವಾಮಿ ಅವರು ಸದನದ ಕಾರ್ಯಕಲಾಪಗಳಿಗೆ ಅಡ್ಡಿಪಡಿಸುತ್ತಿರುವುದರಿಂದ

ಅವರನ್ನು ಈ ಸಭೆಯ ಅಧಿವೇಶನ ಮುಗಿಯುವವರೆಗೆ ಸಭೆಗೆ ಬಾರದಂತೆ ನಿಷೇಧಿಸುವುದು"

(ನಿರ್ಣಯ ಅಂಗೀಕಾರವಾಯಿತು)

ಅಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಮಾತೃ ಭಾಷೆಯಲ್ಲಿ ಶಿಕ್ಷಣ ಕಡ್ಡಾಯವಾಗಬೇಕೆಂದು ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಜಾರಿಗೊಳಿಸುವುದರ ಬಗ್ಗೆ

+ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಅಧ್ಯಕ್ಷರೇ, ಮಾತೃ ಭಾಷೆಯಲ್ಲಿ ಶಿಕ್ಷಣ ಮಾಧ್ಯಮ ಕಡ್ಡಾಯವಾಗಬೇಕೆನ್ನುವಂತಹ ಸರ್ವೋಚ್ಚನ್ಯಾಯಾಲಯದ ತೀರ್ಪನ್ನು ಅನುಷ್ಠಾನ ಮಾಡಬೇಕೆಂದು ಮತ್ತು ಅದಕ್ಕೆ ಬೇಕಾದಂತಹ ಸರಕಾರದ ಆದೇಶವನ್ನು ಹೊರಡಿಸಬೇಕೆಂದು ಕನ್ನಡ ಶಕ್ತಿ ಕೇಂದ್ರ ಡಾ॥ಚಿದಾನಂದ ಮೂರ್ತಿಯವರು ಗೋಪಾಲ ಗೌಡ ವೃತ್ತದ ಬಳಿ ಅಮರಣಾಂತ ಉಪವಾಸಮಾಡುತ್ತಿದ್ದಾರೆ. ಸರ್ವೋಚ್ಚ ನ್ಯಾಯಾಲಯ ಈ ರೀತಿ ತೀರ್ಪನ್ನು ಕೊಟ್ಟ ಕ್ಷಣದಲ್ಲಿಯೇ ಸರಕಾರ ಸರ್ಕಾರಿ ಆಜ್ಞೆಯನ್ನು ಹೊರಡಿಸಿ ಅದು ಕಾರ್ಯಗತವಾಗುವಂತಹ ಕಳಕಳಿಯನ್ನು ವ್ಯಕ್ತಪಡಿಸಬೇಕಾಗಿತ್ತು. ಮಂಡ್ಯದ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮವಾದಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಕಳಕಳಿಯಿಂದ ತಕ್ಷಣ ಸಂಬಂಧಪಟ್ಟ ಸರಕಾರಿ ಆಜ್ಞೆಯನ್ನು ಹೊರಡಿಸುತ್ತೇವೆಂದು ಹೇಳಿದ್ದಾರೆ. ಸರಕಾರಕ್ಕೆ ಕನ್ನಡದ ಬಗ್ಗೆ ಕಳಕಳಿ ಇದ್ದರೆ ಸರ್ವೋಚ್ಚ ನ್ಯಾಯಾಲಯ ತನ್ನ ತೀರ್ಪನ್ನು ಕೊಟ್ಟ ಕ್ಷಣದಲ್ಲಿ ಇದನ್ನು ಕಾರ್ಯಗತ ಮಾಡುವಂತಹ ಸರಕಾರಿ ಆಜ್ಞೆಯನ್ನು ನೀವು ಹೊರಡಿಸಬೇಕಾಗಿತ್ತು. ಕನ್ನಡ ನಾಡಿನ ಜನತೆಯ ಪರವಾಗಿ ಇಂತಹ ಒಬ್ಬ ಹಿರಿಯರಾದ ಶ್ರೀ ಚಿದಾನಂದ ಮೂರ್ತಿಯವರು ಅಮರಣಾಂತ ಉಪವಾಸ ಮಾಡುವಂತಹ ಪರಿಸ್ಥಿತಿಗೆ ತಂದಿರುವುದು ಕನ್ನಡ ನಾಡಿನ ಜನರಿಗೆ ಒಂದು ಅಪಮಾನವಾದಂತಹ ಕೆಲಸ ಮಾಡಿದ ಹಾಗಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಕನ್ನಡದ ಸರಕಾರ ಇದೆಯೋ ಅಥವಾ ಬೇರೆ ಸರಕಾರ ಇದೆಯೋ, ಸರಕಾರ ಏನು ಮಾಡುತ್ತಿದೆ ಎಂಬ ಗೊಂದಲದಲ್ಲಿ ಜನ ಇರುವಂತಹ ಪರಿಸ್ಥಿತಿ ಒದಗಿ ಬಂದಿದೆ. ನಿಮಗೂ ಕಳಕಳಿ ಇದೆ ಎಂದು ನನ್ನ ಭಾವನೆ ಇದೆ. ಸಾಹಿತಿಗಳು ಅನೇಕ ದೊಡ್ಡದೊಡ್ಡ ವ್ಯಕ್ತಿಗಳು, ಮಾನ್ಯ ನರಸಿಂಹಮಯ್ಯನವರು, ಹಾಮಾನಾಯಕ್ ಅವರು ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಗೊರೂರು ಚನ್ನಬಸಪ್ಪನವರು ಹೀಗೆ ಎಲ್ಲರೂ ಇದರ ಬಗ್ಗೆ ಒತ್ತಾಯ ಮಾಡುತ್ತಿರುವಂತಹ ಪರಿಸ್ಥಿತಿ ಇದೆ. ರಾಜ್ಯಾದ್ಯಂತ ಗೊಕಾಕ್ ಚಳುವಳಿ ಮಾದರಿ ಚಳುವಳಿಯನ್ನು ಪ್ರಾರಂಭ ಮಾಡುವಂತಹ ಪರಿಸ್ಥಿತಿ ಒದಗಿ ಬರಬಹುದು. ಆದ್ದರಿಂದ ನನ್ನ ಕಳಕಳಿ ಇರುವಂಥಾದ್ದು ಈ ಕ್ಷಣಕ್ಕೆ ದಿನಾಂಕ 1-4-94ರಿಂದ ಇದು ಕಾರ್ಯರೂಪಕ್ಕೆ ಬರುವಂತೆ ಸರಕಾರಿ ಆಜ್ಞೆಯನ್ನು ಹೊರಡಿಸಬೇಕೆಂದು ನಾನು ವಿನಂತಿಸುತ್ತೇನೆ. ಕೇವಲ ಸರಕಾರೀ ಆಜ್ಞೆ ಹೊರಡಿಸಿದರೆ ಮಾತ್ರ ಆಗುವುದಿಲ್ಲ, ಸರಕಾರಿ ಆದೇಶವನ್ನು ಸಮಗ್ರವಾಗಿ ಕಾರ್ಯರೂಪಕ್ಕೆ ತರಲು ಅಧಿಕಾರಿಗಳ ಜೊತೆಯಲ್ಲಿ ಶಿಕ್ಷಣ ಕ್ಷೇತ್ರದ ಪ್ರತಿನಿಧಿಗಳನ್ನು ಸೇರಿಸಿ ಒಂದು ಸಮಿತಿ ರಚನೆ ಮಾಡಿ, ಸರ್ವೋಚ್ಚ ನ್ಯಾಯಾಲಯದ ತೀರ್ಪು ಕಾರ್ಯರೂಪಕ್ಕೆ ಬರುವಂತೆ ನೋಡಿಕೊಳ್ಳಬೇಕು. ಈ ಕಾರ್ಯಕ್ರಮವನ್ನು ಜಾರಿಗೆ ತರದೇ ಹೋದರೆ ನಾವೂ ಕೂಡ ಅಲ್ಲಿಗೇ ಹೋಗಿ ಉಪವಾಸ ಕುಳಿತುಕೊಳ್ಳುವಂತಹ ಪರಿಸ್ಥಿತಿ ಬರಬಹುದು. ಇಲ್ಲಿರುವ ಯಾವುದೇ ಸದಸ್ಯರಿಗೆ ಈ ಸರಕಾರೀ ಆಜ್ಞೆಯನ್ನು ಹೊರಡಿಸುವುದಕ್ಕೆ ಅಭ್ಯಂತರವಿಲ್ಲವೆಂದು ನಾನಾದರೂ ಭಾವಿಸಿದ್ದೇನೆ. ಇದು 1-4-94ರಿಂದ ಜಾರಿಗೆ ಬರುವಂತೆ ಸರಕಾರಿ ಆಜ್ಞೆಯನ್ನು ಹೊರಡಿಸಬೇಕು. ಅವರು ಅಮರಣಾಂ-